

ಡಾ.ವಿನೋದ ಛೆಬ್ಬಿ

ಗಂಡಹೆಂಡಿರ ವಿರಸವನ್ನು ಸಂಬಂಧಿಕರು ಬಗೆಹರಿಸಲು ಯಾಕೆ ಸಾಧ್ಯವಿಲ್ಲ?

# 18: ತ್ರಿಕೋನೀಕರಣದ ಆಳಗಲ

ಕಳೆದ ವಾರ ತ್ರಿಕೋನೀಕರಣದ ಬಗೆಗೆ ಮಾತಾಡುತ್ತಿದ್ದೆವು. ಸಂಗಾತಿಗಳಿಬ್ಬರ ನಡುವಿನ ಸಮತೋಲ ಸಂಬಂಧವು ಮೂರನೆಯವರ ಪ್ರವೇಶದಿಂದ ಹೇಗೆ ಪ್ರಭಾವಿತವಾಗುತ್ತದೆ ಎಂದು ತಿಳಿದುಕೊಂಡೆವು.

ತ್ರಿಕೋನೀಕರಣದ ಹುಟ್ಟು ಹೇಗಾಗುತ್ತದೆ?

ಸಂಗಾತಿಗಳು ಪ್ರೀತಿ ಬೆಳೆಸಿಕೊಳ್ಳಬೇಕಾದರೆ ಪರಸ್ಪರರ ಗುಣಗಳನ್ನು ಮೆಚ್ಚಿಕೊಳ್ಳುವುದರ ಜೊತೆಗೆ ಅವರ ಅವಗುಣಗಳನ್ನೂ ಒಪ್ಪಿಕೊಳ್ಳಬೇಕಾಗುತ್ತದೆ– ಹೊಂದಾಣಿಕೆಯ ಪ್ರಕ್ರಿಯೆ ನಡೆಯುತ್ತಿರುವಾಗ ಮುಂದೆ ಏನಾಗುತ್ತದೋ ಎಂದು ಅನಿಶ್ಚಿತತೆ ಕಾಡುತ್ತದಲ್ಲವೆ? ಆಗ ಹುಟ್ಟುವ ಆತಂಕವು ಹೆಚ್ಚಾದಾಗಲೆಲ್ಲ ತನ್ನಿಂದ ನಿಭಾಯಿಸಲು ಅಸಾಧ್ಯವೆನ್ನಿಸಿ ಆತ್ಮವಿಶ್ವಾಸ ಕಡಿಮೆ ಆಗುತ್ತದೆ. ಆಗ ನಮ್ಮ ಮೇಲಿನ ಭರವಸೆಗೆ ಪುಷ್ಟಿಕೊಡಲು ಸಹಜವಾಗಿಯೇ ಮೂರನೆಯವರ ಜೊತೆಗೆ ಹಂಚಿಕೊಳ್ಳಲು ಬಯಸುತ್ತೇವೆ. ಸಮಸ್ಯೆ ಇಲ್ಲೇ ಬರುವುದು! ನಮ್ಮ ಹಂಚಿಕೊಳ್ಳುವ ಬಯಕೆಯನ್ನು ಸಹಾಯಕ್ಕೆ ಬೇಡಿಕೆಯೆಂದು ತಪ್ಪಾಗಿ ಅರ್ಥೈಸಿಕೊಂಡು ಸಲಹೆ ಕೊಡಲು ಆರಂಭಿಸುತ್ತಾರೆ. (ಹೀಗೆ ತಪ್ಪಾಗಿ ತಿಳಿಯಲು ಏನು ಕಾರಣ ಎಂದು ಅವಲಂಬನೆ–ಸಹಾವಲಂಬನೆಯ ಬಗೆಗೆ ಚರ್ಚಿಸುವಾಗ ನೋಡೋಣವಂತೆ.) ಹಾಗೆಯೇ, ಸಲಹೆ ಕೊಡದೆ ಕೇವಲ ಆಲಿಸುವುದು ಹಾಗೂ ಅನುಕಂಪ ತೋರುವುದು ಎಷ್ಟು ಕಷ್ಟವೆಂಬುದು ನಮಗೆಲ್ಲರಿಗೂ ಗೊತ್ತು ಇದನ್ನು ದಾಂಪತ್ಯಕ್ಕೆ ಚಿಕಿತ್ಸೆಯ ಬಗೆಗೆ ಬಂದಾಗ ನೋಡೋಣವಂತೆ. ಒಟ್ಟಾರೆ ಹೇಳಬೇಕೆಂದರೆ, ತಲೆಯಲ್ಲಿ ಸಲಹೆಯ ಸೆಲೆ ಬಂತೋ, ತ್ರಿಕೋನೀಕರಣ ಹಾಜರ್!

ತ್ರಿಕೋನೀಕರಣದಲ್ಲಿ ಒಬ್ಬರು ಮೂರನೆಯವರಿಂದ ಪ್ರಭಾವಿತರಾದಷ್ಟೂ ಅವರ ಸಂಗಾತಿಗೆ ಒಂಟಿತನ, ಅನಾಥಭಾವ, ಅಥವಾ ಸಾಂಗತ್ಯದ ಅಭಾವ ಕಾಡುತ್ತದಲ್ಲವೆ? ಇದನ್ನು ಜನಸಾಮಾನ್ಯರು ಹೇಗೆ ನಿಭಾಯಿಸುತ್ತಾರೆ, ಹಾಗೂ ಏನೇನು ತಂತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ?

- ಹೊರಗಿನ ಭಾವಬಂಧವನ್ನು ದುರ್ಬಲಗೊಳಿಸುವ ಯತ್ನ: ಉದಾ. ಮೈದುನನು ಟೀವಿಯ ಮುಂದೆ ಹೆಚ್ಚಾಗಿ ಕಾಲ ಕಳೆಯುತ್ತಿರುವುದರಿಂದ ತನ್ನ ಮೆಚ್ಚಿನ ಕಾರ್ಯಕ್ರಮಗಳನ್ನು ವೀಕ್ಷಿಸಲು ಅವಕಾಶ ಇವಳಿಗೆ ಸಿಗುತ್ತಿಲ್ಲ. ಆಗ ಇವಳು ಗಂಡನಿಗೆ ವರದಿ ಒಪ್ಪಿಸುತ್ತಾಳೆ– ನಿಮ್ಮ ತಮ್ಮ ಪಾಠದ ಕಡೆಗೆ ಗಮನ ಕೊಡುತ್ತಿಲ್ಲ, ಹಾಳಾಗುತ್ತಿದ್ದಾನೆ! (ಇದಕ್ಕೆ ರೂಢ ಭಾಷೆಯಲ್ಲಿ ಚಾಡಿ ಹೇಳುವುದು, ಕಿವಿ ಊದುವುದು ಮುಂತಾಗಿ ಹೆಸರಿದೆ.) ಇಲ್ಲಿ ಉದ್ದೇಶವು ಮೂರನೆಯವರ ದೋಷವನ್ನು ಎತ್ತಿತೋರಿಸುವುದೇ ವಿನಾ ತನಗಾಗುವ ವ್ಯಥೆ ಅಥವಾ ಅನನುಕೂಲತೆಯನ್ನಲ್ಲ!
- ಸಂಗಾತಿಗಳ ಭಾವಬಂಧವನ್ನು ಗಟ್ಟಿಗೊಳಿಸುವ ಹುಸಿಯತ್ನ: ಉದಾ. ಇವನು ತನ್ನ ಹೆಂಡತಿಯ ಜೊತೆ– ಲೈಂಗಿಕ ಕ್ರಿಯೆಯ ಉದ್ದೇಶವಿಲ್ಲದಿದ್ದರೆ – ಮೈಕೈ ಮುಟ್ಟಿ ಪ್ರೀತಿಯನ್ನು ಪ್ರಕಟಪಡಿಸುವುದಿಲ್ಲ. ಅಷ್ಟೇ ಅಲ್ಲ, ಅವಳ ಒಳ್ಳೆಯ ಕಾರ್ಯಕ್ಕೆ ಮೆಚ್ಚುಗೆ ಸೂಚಿಸುವುದೂ ಇಲ್ಲ. ತನ್ನ ಮೂಲ ಕುಟುಂಬದಲ್ಲಿ ಈ ಪದ್ಧತಿಯನ್ನು ಇಲ್ಲವೆಂದು ಒಂದು ಥರಾ ಅಭಿಮಾನದಿಂದ ಹೇಳಿಕೊಳ್ಳುತ್ತಾನೆ. (ಕುಟುಂಬದಲ್ಲಿ ಪ್ರೀತಿಯ ಮುಕ್ತ ಅಭಿವ್ಯಕ್ತಿ ಯಾಕೆ ಮುಕ್ಕಾಗುತ್ತದೆ ಎಂಬುದನ್ನು ನಂಟಿನ ವಿಷಯ ಬಂದಾಗ ಅರ್ಥಮಾಡಿಕೊಳ್ಳೋಣ.) ಅದೇ ಅವನ/ಳ ತಾಯ್ತಂದೆಯರು ಬಂದಾಗ ಹೆಂಡತಿಯನ್ನು ಎಲ್ಲರೆದುರಿಗೆ ಮೆಚ್ಚುತ್ತ ಮೈಕೈ ತಡವುತ್ತ ತಾವಿಬ್ಬರೂ ಎಷ್ಟೊಂದು ಹತ್ತಿರವಾಗಿದ್ದೇವೆ ಎಂದು ತೋರಿಸುತ್ತಾನೆ. ಇದು ಹೆಂಡತಿಗೆ ಕೃತಕ ಎನ್ನಿಸಿದರೂ ಎಷ್ಟೋ ಸಮಾಧಾನ ಕೊಡುತ್ತದೆ!
- ಮೂರನೆಯವರನ್ನು ಹೊರಗಿಡುವುದು: ಉದಾ. ತನ್ನ ಹೆಂಡತಿ ಅವಳ ಅಮ್ಮನೊಡನೆ ಗಂಟೆಗಟ್ಟಲೆ ಮಾತಾಡುವಾಗ ಇವನಿಗೆ ಹೆಂಡತಿಯೊಡನೆ ಸಮಯ ಸಿಗದೆ, ಅವಳನ್ನು ಕಳಪೆ ಚಲನಚಿತ್ರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಮಾತಾಡುತ್ತಾನೆ!
- ಎಲ್ಲರಿಂದ ದೂರ: ಇವಳ ಗಂಡ ಹಾಗೂ ಅತ್ತೆ ಒಂದಾಗಿ ಇವಳನ್ನು ಎಷ್ಟೊಂದು ಹೊರಗಿಟ್ಟಿದ್ದಾರೆ ಎಂದರೆ ಇವಳಿಗೆ ಗಂಡನ ಜೊತೆಗೆ ಭಾವಬಂಧ ಬೆಳೆಸಲು ಅವಕಾಶವೇ ಆಗಿಲ್ಲ. ಹಾಗಾಗಿ ಒಂಟಿಯಾದ ಈಕೆ ಖಿನ್ನತೆಯಿಂದ ನರಳುತ್ತ ಮೂಲೆ ಸೇರಿದ್ದಾಳೆ. ಇದನ್ನು ಗಂಡ ವೀಕ್ ಮೈಂಡ್ ಎಂದು ಆರೋಪಿಸುತ್ತ ವೈದ್ಯರ ಸಲಹೆ ಕೇಳಿದ್ದಾನೆ. ವೈದ್ಯರು ಡಿಪ್ರೆಶನ್ ಎಂದು ತಪ್ಪಾಗಿ ಗುರುತಿಸಿ ತಪ್ಪು ಔಷಧಿಯನ್ನೂ ಕೊಟ್ಟಿದ್ದಾರೆ! ಆದರೆ ನನಗೆ ಗೊತ್ತಿರುವ ಇನ್ನೊಬ್ಬಳು ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ಅತ್ತೆ ಊರಿಂದ ಬಂದರೆ ಸಾಕು, ಆಕೆ ತಿರುಗಿ ಹೋಗುವ ತನಕ ಈಕೆ ತವರು ಸೇರುತ್ತಾಳೆ. ಗಂಡನಿಗೆ ಬೇಡವಾದ ಭಾವಬಂಧ ತನಗೇಕೆ?
- ಮೂರನೆಯವರಿಗೆ ಅತಿ ಹತ್ತಿರವಾಗುವುದು: ಉದಾ. ನನ್ನ ಬಂಧುವೊಬ್ಬ ಬಿಡುವಿನ ಸಮಯವನ್ನು ತನ್ನ ಸ್ನೇಹಿತನೊಡನೆ ಇಸ್ಪೀಟಾಟದಲ್ಲಿ ಕಾಲಹರಣ ಮಾಡುತ್ತಿರುವಾಗ ಆತನ ಹೆಂಡತಿ ಕಾಫಿ ಪೂರೈಸಿ ಪೂರೈಸಿ ಸೋತು ಹೋಗಿ, ಕೊನೆಗೆ ಒಂದು ಉಪಾಯ ಮಾಡಿದಳು. ತಾನೂ ಅವರೊಂದಿಗೆ ಆಟಕ್ಕೆ ಸೇರಿದಳು. ಸ್ವಲ್ಪ ದಿನಗಳಲ್ಲೇ ಪರಿಣಿತಳೂ ಆದಳು. ಸ್ನೇಹಿತನೊಂದಿಗೆ ಆಡುತ್ತ ಗಂಡನಿಗೆ ಕಾಫಿ ಮಾಡಲು ಹಚ್ಚಿದಳು. ಪರಿಣಾಮ? ಈಗ ಸ್ನೇಹಿತ ಮನೆಗೆ ಬರುವುದು ನಿಂತಿದೆ!

ವಿಚಿತ್ರವೆಂದರೆ, ತ್ರಿಕೋನೀಕರಣದಲ್ಲಿ ಮೂರನೆಯ ವ್ಯಕ್ತಿಯು ಸಂಗಾತಿಗಳಿಗೆ ಕಾಣುವ ಹಾಗೆ ಹತ್ತಿರವಿರಲೇಬೇಕು, ಅಥವಾ ಅವರ ಸಂಪರ್ಕದಲ್ಲಿ ಇರಲೇಬೇಕು ಎಂದಿಲ್ಲ. ಅವರು ಈ ದಾಂಪತ್ಯದಲ್ಲಿ ಕಾಲಿಡದಿದ್ದರೂ– ಅವರ ಭಾವನಾತ್ಮಕ ಪ್ರತಿನಿಧಿತ್ವ ಇದ್ದರೂ ಸಾಕೇ ಸಾಕು. ದಾಂಪತ್ಯದ ಭಾವಬಂಧದ ಮೇಲೆ ಪರಿಣಾಮ ಆಗುತ್ತದೆ. ಉದಾ. ತಮ್ಮ ಮನೆ ಕಟ್ಟುವ ಗುತ್ತಿಗೆಯನ್ನು ಗಂಡನ ಸ್ನೇಹಿತನಿಗೆ ಕೊಡುವುದೇ ಬೇಡವೇ ಎಂಬುದರ ಬಗೆಗೆ ಗಂಡಹೆಂಡಿರ ನಡುವೆ ಜಗಳ. ಯಾಕೆ? ಅವನು ಒಳ್ಳೆಯ ಅನುಭವಿ ಎಂದು ಗಂಡನ ವಾದ. ಅದು ಸತ್ಯವಾದರೂ ಹೆಂಡತಿಗೆ ಅವನು ಬೇಡ. ಯಾಕೆ? ಈ ನೆಪದಲ್ಲಿ ಇಬ್ಬರೂ ಸೇರುವಾಗ ಅವರ ಗುಂಡಿನ ಅಭ್ಯಾಸವೂ ಸೇರುತ್ತದೆ! ಹಾಗೆಯೇ, ಹೆಂಡತಿಯ ತಂಗಿ ವಿದ್ಯಾಭ್ಯಾಸಕ್ಕಾಗಿ ಇವರೊಡನೆ ಇರುವ ಪ್ರಸ್ತಾಪ ಬಂದದ್ದೇ ತಡ, ಗಂಡ ಬೇಡವೆಂದು ಅಡ್ಡಗಾಲು ಹಾಕಿದ್ದಾನೆ. ಯಾಕೆ? ಮೂರನೆಯವರು ಬಂದರೆ ಯಾವಾಗಲೂ ಹಾಲ್‌ನಲ್ಲೇ ಮಲಗಬೇಕಾಗುತ್ತದೆ. ಆಗ ಇವರಿಬ್ಬರ ಕಾಮಕೂಟದಿಂದ ಮಾತು–ಶಬ್ದ–ಸ್ವರಗಳನ್ನು ತೆಗೆದುಹಾಕಬೇಕಾಗುತ್ತದೆ!

ಸಂಬಂಧದಲ್ಲಿ ಆತಂಕ ಹೆಚ್ಚಿದಷ್ಟೂ ತ್ರಿಕೋನೀಕರಣ ಒಡೆದು ಕಾಣುತ್ತದೆ. ಹಾಗೆಯೇ ಅದರ ಭಾಗೀದಾರರ ಚಲನಶೀಲತೆಯೂ ಹೆಚ್ಚಾಗುತ್ತದೆ. ಇದು ಎಷ್ಟರ ಮಟ್ಟಿಗೆ ಹೋಗುತ್ತದೆಂದರೆ ಕೆಲವೊಮ್ಮೆ ತಾವು ವಿರೋಧಿಸುವವರ ಪಕ್ಷ ಕಟ್ಟಿಕೊಂಡು ಪರವಾದವರನ್ನು ವಿರೋಧಿಸುವುದೂ ಇದೆ. ನಂಬುವುದಿಲ್ಲವೆ? ಈ ದೃಷ್ಟಾಂತ ನೋಡಿ:

ಉತ್ತರ ಕರ್ನಾಟಕದ ತಾಯಿಗೆ ತನ್ನ ಅವಿವಾಹಿತ ಮಗ ಬೆಂಗಳೂರಿನಲ್ಲಿ ಕೆಲಸದ ತರುಣಿಯ ಜೊತೆಗೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ತಿಳಿದುಬಂದಾಗ ಅವಳನ್ನು ಮೆಟ್ಟಿಗೆ ಹಚ್ಚುವ ಸಲುವಾಗಿ ಮಗನ ಮನೆಯಲ್ಲೇ ಧ್ವಜವೂರಿ ಕೆಲಸದವಳಿಗೆ ಕಾಟ ಕೊಡಲು ಶುರುಮಾಡುತ್ತಾಳೆ. ಆದರೆ ಮಗನ ದೃಷ್ಟಿ ವಿಜಾತೀಯ ಹೆಣ್ಣಿನ ಕಡೆ ಇದೆ, ಹಾಗೂ ಅವರಿಬ್ಬರೂ ಮದುವೆಯಾಗಲು ಯೋಜಿಸುತ್ತಿದ್ದಾರೆ ಎಂದು ಗೊತ್ತಾದಾಗ ತಾಯಿ ದಿಗ್ಭ್ರಮೆಗೊಳ್ಳುತ್ತಾಳೆ. ಈಗ ಕೆಲಸದವಳ ಜೊತೆಗೆ ಹತ್ತಿರವಾಗುತ್ತ ಮಗನ ಗೆಳತಿಯ ಬಗೆಗಿನ ತಿರಸ್ಕಾರವನ್ನು ಆಕೆಯೊಂದಿಗೆ ಹಂಚಿಕೊಳ್ಳುತ್ತಾಳೆ. ಅಷ್ಟೇ ಅಲ್ಲ, ಸ್ವಜಾತಿಯಳಾದ ಕೆಲಸದ ಹುಡುಗಿಯನ್ನೇ ಮದುವೆಯಾಗೆಂದು ಮಗನ ಮೇಲೆ ಒತ್ತಾಯ ತರುತ್ತಾಳೆ!

ಇನ್ನು, ದಾಂಪತ್ಯಕ್ಕೆ ನೇರವಾಗಿ ಸಂಬಂಧಪಡದಿರುವ ಜನರು ತ್ರಿಕೋನೀಕರಣಕ್ಕೆ ಸೇರಿಕೊಂಡರೆ ಏನಾಗುತ್ತದೆ ಎಂಬುದನ್ನು ಮುಂದಿನ ಸಲ ನೋಡೋಣವಂತೆ.

(ಸಮೃದ್ಧ ದಾಂಪತ್ಯದ ಕುರಿತು ಕನ್ನಡದಲ್ಲಿ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಇದೇ ಜುಲೈ 25–26ರಂದು ಹಮ್ಮಿಕೊಂಡಿದ್ದೇನೆ. ದಂಪತಿಗಳಿಗೆ ಆದ್ಯತೆಯಿದೆ. ಗರಿಷ್ಠ ಸಂಖ್ಯೆ 20 ಜನರು ಮಾತ್ರ. ಆಸಕ್ತರು ಜುಲೈ 16ರ ಒಳಗಾಗಿ ಸಂಪರ್ಕಿಸಬಹುದು. ದೂರವಾಣಿ: 8494922888.)

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org**